# 2014-15ನೇ ಸಾಲಿನ ಜಿಲ್ಲಾ ವಲಯ ಯೋಜನೆಯ

## ಅನುಷ್ಠಾನದ ಮಾರ್ಗಸೂಚಿಗಳು:-

**I.ಯೋಜನೆಯ ಹೆಸರು :ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (D-03)**

**II. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:**

ತೋಟಗಾರಿಕೆ ಇಲಾಖೆಯು ರಾಜ್ಯದಲ್ಲಿ ಒಟ್ಟು 410 ಕ್ಷೇತ್ರ ಮತ್ತು ಸಸ್ಯಾಗಾರಗಳನ್ನು ಹೊಂದಿದ್ದು, ಇವುಗಳ ಒಟ್ಟಾರೆ ಪ್ರದೇಶ 17532 ಎಕರೆಗಳಾಗಿರುತ್ತದೆ. ಈ ಕ್ಷೇತ್ರಗಳನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಿ ಸಂಪನ್ಮೂಲ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು 2008-09ನೇ ಸಾಲಿನಲ್ಲಿ ವಿಶೇಷ ಉದ್ದೇಶಕ ವಾಹಕವಾಗಿ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯನ್ನು ಸ್ಥಾಪಿಸಲಾಗಿದೆ. ಇಲಾಖಾ ಕ್ಷೇತ್ರಗಳಲ್ಲಿ ಫಸಲು ಬಿಡುವ ಹಣ್ಣು ಹಾಗೂ ಪ್ಲಾಂಟೇಷನ್ ಬೆಳೆಗಳಿದ್ದು, ಅವುಗಳಿಂದ ಬರುವ ಫಸಲನ್ನು ವಿಲೇವಾರಿ ಮಾಡಿ ಆದಾಯ ಪಡೆಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ, ಕ್ಷೇತ್ರಗಳ ಆದಾಯ ಹೆಚ್ಚಿಸುವುದು ಹಾಗೂ ಕ್ಷೇತ್ರದ ಫಲವತ್ತತೆಯನ್ನು ಕಾಪಾಡುವುದು ಪ್ರಮುಖ ಅಂಶವಾಗಿರುತ್ತದೆ. ಆದ್ದರಿಂದ, ಕ್ಷೇತ್ರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುವ ಸಲುವಾಗಿ ಈ ಯೋಜನೆಯಡಿ ರೂ.194.43 ಲಕ್ಷ ಅನುದಾನ ನಿಗದಿಪಡಿಸಿಕೊಳ್ಳಲಾಗಿದೆ.

**III. ಯೋಜನೆಯ ಉದ್ದೇಶಗಳು:**

ಈ ಯೋಜನೆಯಡಿ ಪ್ರಮುಖವಾಗಿ ಕ್ಷೇತ್ರಗಳ ನಿರ್ವಹಣೆ ಕಾರ್ಯವನ್ನು ಕೈಗೊಳ್ಳುತ್ತಿದ್ದು, ಈ ಕೆಳಕಂಡ ನಿರ್ವಹಣೆ ಪದ್ಧತಿಗಳನ್ನು ಅನುಸರಿಸುವುದು ಮುಖ್ಯ ಉದ್ದೇಶವಾಗಿರುತ್ತದೆ.

- ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹಸಿರೆಲೆ ಗೊಬ್ಬರ ಬೀಜ ಖರೀದಿಸಿ, ಉಳುಮೆ ಮಾಡಿ, ಬಿತ್ತನೆ ಮಾಡುವುದು, ಗಿಡಗಳಿಗೆ ಪಾತಿ ಮಾಡುವುದು.
- ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳಾದ ವರ್ಮಿಕಾಂಪೋಸ್ಟ್ / ಬಯೋಡೈಜೆಸ್ಟರ್, ಕಾಂಪೌಂಡ್‌ಗೋಡೆ, ತಂತಿಬೇಲಿ, ನೀರು ಸಂಗ್ರಹಣಾ ಘಟಕಗಳು ಇತ್ಯಾದಿ ಕೆಲಸಗಳನ್ನು ಕೈಗೊಳ್ಳುವುದು.
- ಕ್ಷೇತ್ರಗಳಲ್ಲಿರುವ ಗೋಡೌಸ್ , ಫಾರಂಹೌಸ್ ಇತ್ಯಾದಿ ರಿಪೇರಿ ಕಾರ್ಯವನ್ನು ಕೈಗೊಳ್ಳುವುದು.

**IV. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:**

**ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ :**

1. ಇಲಾಖೆಯು ನಿಗದಿಪಡಿಸಿರುವ ದರದಲ್ಲಿ (ಎಸ್.ಆರ್. ದರದ ಪ್ರಕಾರ) ಕ್ಷೇತ್ರ / ನರ್ಸರಿಗಳಲ್ಲಿರುವ ಹಣ್ಣಿನ ಗಿಡಗಳಿಗೆ ಪಾತಿ ಮಾಡಿಸುವುದು, ಕಳೆ ನಿಯಂತ್ರಣ, ನೀರಾವರಿ, ಜೈವಿಕ ಪರಿಕರಗಳ ಉತ್ಪಾದನೆ ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳುವುದು.
2. ಗೊಬ್ಬರ, ಜೈವಿಕ ಪರಿಕರಗಳ ಉತ್ಪಾದಿಸಿ/ಸಕಾಲದಲ್ಲಿ ಖರೀದಿಸಿ ಕ್ಷೇತ್ರ/ ಸಸ್ಯಾಗಾರಗಳಲ್ಲಿರುವ ಗಿಡಗಳಿಗೆ ಹಾಕಿ ಸಂರಕ್ಷಿಸುವುದು. ಈ ಬಾಬ್ತಿಗೆ ರೂ.194.43 ಲಕ್ಷಗಳನ್ನು ನಿಗದಿಪಡಿಲಾಗಿದೆ.

**V.ಅನುದಾನ:**

ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ನಿರ್ವಹಣೆ (D-03)- ರೂ.194.43 ಲಕ್ಷಗಳನ್ನು ನಿಗದಿಪಡಿಸಿದೆ.

**VI. ತಾಂತ್ರಿಕ ವೈಶಿಷ್ಟತೆಗಳು ಹಾಗೂ ಅನುಷ್ಠಾನ:**

**ನಿರ್ವಹಣೆ**:

1. ವರ್ಷದಲ್ಲಿ ಎರಡು ಬಾರಿ ಉಳುಮೆ ಮಾಡುವುದು.
2. ಎಲ್ಲಾ ಕ್ಷೇತ್ರಗಳನ್ನು ಸಾವಯುವ ಕೃಷಿಗೆ ಪರಿವರ್ತಿಸಿ, ಸಾವಯುವ ಕೃಷಿ ಕ್ರಮಗಳನ್ನು ಕೈಗೊಳ್ಳಬೇಕು. ಸಾವಯುವ ಗೊಬ್ಬರ, ಎಲೆ-ಒಣಗಿದ ಕಡ್ಡಿ, ಗರಿಗಳನ್ನು ಗಿಡಗಳ ಬುಡದಲ್ಲಿ ಹೊದಿಕೆಯಾಗಿ ಅಳವಡಿಸುವುದು. ಹೊದಿಕೆ ಮೇಲೆ ಬಯೋಡೈಜೆಸ್ಟರ್‌ನ ಜೀವಸಾರವನ್ನು ತಿಂಗಳಿಗೊಮ್ಮೆ ಸಿಂಪಡಿಸಬೇಕು.
3. ಅರ್ಧ ಚಂದ್ರಾಕೃತಿ ಬಂದುಗಳು, catch pit ಹಾಗೂ ತಾಕುಗಳಿಗೆ ಬದುಗಳನ್ನು ನಿರ್ಮಾಣ ಮಾಡುವ ಮೂಲಕ ನೀರಿನ ಸಂಗ್ರಹಣೆ ಮಾಡುವುದು.
4. ಸೂಕ್ತ ಸ್ಥಳದಲ್ಲಿ ಕೃಷಿಹೊಂಡ, ನಾಲಾಬದು, ಚೆಕ್ ಡ್ಯಾಂ ನಿರ್ಮಿಸಿ, ಮಳೆನೀರು ಸಂಗ್ರಹಿಸಿ, ಭೂ ಜಲ ಸಂಪನ್ಮೂಲಗಳನ್ನು ಮಾಡುವುದು.
5. ಒಣಗಿದ, ಹಳೆಯ ಮತ್ತು ಫಲ ಬಿಡದ ಗಿಡಗಳನ್ನು ತೆಗದು ಹೊಸ ಗಿಡಗಳನ್ನು ನೆಡಬೇಕು.
6. ಬಯೋಪೆಸ್ಟಿಸೈಡ್ ಸಿಂಪರಣೆ ಮಾಡುವುದು.
7. ಪಂಪ್‌ಸೆಟ್ ರಿಪೇರಿ ಇತ್ಯಾದಿ ಕೆಲಸಗಳನ್ನು ಕೈಗೊಳ್ಳುವುದು.

**VII.ಅನುಷ್ಠಾನ ವೇಳಾಪಟ್ಟಿ:**

**ನಿರ್ವಹಣೆ:**

- ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹಸಿರೆಲೆ ಗೊಬ್ಬರ ಬೀಜ ಖರೀದಿಸಿ, ಉಳುಮೆ ಮಾಡಿ, ಬಿತ್ತನೆ ಮಾಡುವುದು, ಗಿಡಗಳಿಗೆ ಪಾತಿ ಮಾಡುವುದು ಇತ್ಯಾದಿಗಳನ್ನು **ಮೇ - ಜೂನ್ ಮಾಹೆಯಲ್ಲಿ** ಕೈಗೊಳ್ಳುವುದು.
- ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳಾದ ವರ್ಮಿಕಾಂಪೋಸ್ಟ್ / ಬಯೋಡೈಜೆಸ್ಟರ್, ಕಾಂಪೌಂಡ್‌ಗೋಡೆ, ತಂತಿಬೇಲಿ, ನೀರು ಸಂಗ್ರಹಣಾ ಘಟಕಗಳು ಇತ್ಯಾದಿ ಕೆಲಸಗಳನ್ನು **ಜೂನ್- ಆಗಸ್ಟ್ ಮಾಹೆಯಲ್ಲಿ** ಕೈಗೊಳ್ಳುವುದು.
- ಕ್ಷೇತ್ರಗಳಲ್ಲಿರುವ ಗೋಡೌಸ್ , ಫಾರಂಹೌಸ್ ಇತ್ಯಾದಿ ರಿಪೇರಿ ಕಾರ್ಯವನ್ನು **ಆಗಸ್ಟ್ ಮಾಹೆಯ ಅಂತ್ಯದೊಳಗೆ** ಕೈಗೊಳ್ಳುವುದು.

  ಘಟಕಗಳ ಅನುಷ್ಠಾನವನ್ನು ಈ ಮೇಲೆ ನಿಗದಿಪಡಿಸಿರುವ ಅನುಷ್ಠಾನ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು. ತಪ್ಪಿದಲ್ಲಿ ಸಂಬಂಧಪಟ್ಟ ಹಿಸತೋನಿ (ರಾವ) ಹಾಗೂ ತೋಉನಿ(ಜಿಪಂ) ರವರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

**VIII.ಅನುಬಂಧಗಳು:**

1) ಕ್ರಿಯಾ ಯೋಜನೆ-2014-15

2) ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಆದೇಶ:

3) ಪ್ರತಿ ಮಾಹೆಯ ಪ್ರಗತಿ ವರದಿ ಸಲ್ಲಿಸುವ ನಮೂನೆ:

**IX. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).**

1. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ GPS ಮುಖಾಂತರ ಛಾಯಾ ಚಿತ್ರವನ್ನು ತೆಗೆದು ವರದಿಯೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.